**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಅಸಲು ದಾವಾ ಸಂಖ್ಯೆ : 381/2022**

**ಪಿ. ಡಬ್ಲೂ : 1**

---------------------------------------------------------------------------------

**ಸತ್ಯ ಪ್ರತಿಜ್ಞೆಯ ಮೇರೆಗೆ, ದಿನಾಂಕಃ 22.11.2025**

****

**ವಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ . D.R.G ವಕೀಲರಿಂದಃ**

1. ದಾವಾ ಸ.ನಂ. 81/1 ಎ ಹಾಗೂ 2 ಎಕರೆ 1 ಗುಂಟೆ ಇರುತ್ತದೆ. ದಾವಾ ಸ್ವತ್ತು 6 ಗುಂಟೆ ದಕ್ಷಿಣದ ಕಡೆ ಇರುತ್ತದೆ. 6 ಗುಂಟೆ ಜಮೀನಿನ ದಕ್ಷಿಣಕ್ಕೆ ಪ್ರತಿವಾದಿ ಇರುತ್ತಾರೆ , ಉತ್ತರಕ್ಕೆ ನನ್ನ ಜಮೀನು , ಪೂರ್ವಕ್ಕೆ ನನ್ನ ಜಮೀನು , ಪಶ್ಚಿಮಕ್ಕೆ ಸರ್ಕಾರಿ ಹಳ್ಳ ಇರುತ್ತದೆ. ನಾನು ಹಾಗೂ ಪ್ರತಿವಾದಿ ಒಂದೇ ಊರಿನವರು ಆಗಿರುತ್ತೇವೆ. ದಾವಾ ಸ್ವತ್ತು 6 ಗುಂಟೆ ಜಮೀನು ಗುರುತಿಸಲು ಏನಾದರೂ ಕಲ್ಲುಗಳು ಇವೆಯೇ ಎಂದರೆ ಸಾಕ್ಷಿಯು ಇರುತ್ತವೆ ಎಂದು ನುಡಿಯುತ್ತಾರೆ. ಪ್ರತಿವಾದಿಯು 6 ಗುಂಟೆ ಜಮೀನು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಕೈನಕಾಶೆ ವಾಸ್ತವಿಕವಾಗಿ ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಪ್ರತಿವಾದಿಯು ಕ.ಡ ಉತಾರಗಳ ಪ್ರಕಾರ ಅದರಲ್ಲಿ ಉಲ್ಲೇಖಿಸಿರುವ ಕ್ಷೇತ್ರ ಪ್ರಕಾರ ವಹಿವಾಟನಲ್ಲಿ ಇರುತ್ತೇವೆ ಎಂದರೆ ಸಾಕ್ಷಿಯು ವಹಿವಾಟನಲ್ಲಿ ಇದ್ದೆವು ಆದರೆ ಇತ್ತೀಚೆಗೆ 6 ಗುಂಟೆ ಒತ್ತುವರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ದಕ್ಷಿಣಕ್ಕೆ ಯಾವತ್ತು ಸಹ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ.

2. ಅಸಲ ದಾವಾ ಸಂಖ್ಯೆ 1849/2012 ರಲ್ಲಿ ಭೂಮಾಪಕರು ಬಂದು ಭೂಮಾಪನ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಗೆ ನೋಟಿಸನ್ನು ನೀಡದೆ ಭೂಮಾಪನ ಮಾಡಲಾಗಿದೆ ಎಂದರೆ ಸರಿಯಲ್ಲ. ದಿಃ 12.08.2018 ರಂದು ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ದಿಃ 01.09.2018 ರಂದು ಪಕ್ಷಗಾರರ ಸಮಕ್ಷಮ ಕಲ್ಲುಗಳನ್ನು ಹಾಕಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯಾಗಲಿ ಅವರ ತಂದೆಯವರಾಗಲಿ 6 ಗುಂಟೆ ಜಮೀನನ್ನು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ಅಸಲ ದಾವಾ ಸಂಖ್ಯೆ 1849/2012 ರಲ್ಲಿ ಸ.ನಂ. 81/1/ಬಿ ಹಾಗೂ ಸ.ನಂ. 81/2 ರ ಮಧ್ಯೆ ಇದ್ದ ಒಡ್ಡಿನ ಬಗ್ಗೆ ಮಾತ್ರ ತಂಟೆ ತಕರಾರು ಇತ್ತು ಎಂದರೆ ಸರಿಯಲ್ಲ. ನಮ್ಮ ಕೈನಕಾಶೆಯಲ್ಲಿ ತೋರಿಸಿರುವ ಎ ಬಿ ಒಡ್ಡು

ಇರುವುದಿಲ್ಲ ಅದು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ.  ಅಸಲ ದಾವಾ ಸಂಖ್ಯೆ 1849/2012 ನ್ನು ಸಲ್ಲಿಸಿದಾಗ ಈಗ ತೋರಿಸಿರುವ ಕೈನಕಾಶೆಯಲ್ಲಿ ಇರುವ ಸ.ನಂ. 81/1ಅ ಅಸ್ತಿತ್ವದಲ್ಲಿ  ಇರಲಿಲ್ಲ ಎಂದರೆ ಸರಿಯಲ್ಲ. ಎ ಡಿ ಎಲ್ ಆರ್ ಕಚೇರಿಯವರ ಕೆಳಗಿನ ಸಿಬ್ಬಂದಿಯವರು ಭೂಮಾಪನ ಮಾಡಿದ್ದರಿಂದ ಭೂಮಾಪನವು ಸರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಭೂಮಾಪನವನ್ನು ಬೇಕಾಯ್ದೇಶಿರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಭೂಮಾಪನ ಮಾಡುವ ಸಮಯದಲ್ಲಿ ನಾನಾಗಲಿ, ಪ್ರತಿವಾದಿಯಾಗಲಿ ಒಪ್ಪಿ ಕೊಂಡಿಲ್ಲ ಎಂದರೆ ಸರಿಯಲ್ಲ.  ಅಸಲ ದಾವಾ ಸಂಖ್ಯೆ 1849/2012 ರಲ್ಲಿ ನಾನು ಹಾಗೂ ಪ್ರಸ್ತುತ ಪ್ರತಿವಾದಿ ಪಕ್ಷಗಾರರಾಗಿರಲಿಲ್ಲ ಎಂದರೆ ಸರಿ. ಆದ್ದರಿಂದ ಭೂಮಾಪನವು ಪ್ರತಿವಾದಿಯು ಒಪ್ಪಿ ಕೊಳ್ಳಲಾಗುವುದಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪ್ರತಿವಾದಿಯು ಸ.ನಂ. 81/1/ಬ ಇದರ ಮಾಲೀಕನಾಗಿರಲಿಲ್ಲ ಆದ್ದರಿಂದ ಭೂಮಾಪನವನ್ನು ಒಪ್ಪಿ ಕೊಳ್ಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಭೂಮಾಪಕರು ನಮಗೆ ನೋಟಿಸನ್ನು ನೀಡಿಲ್ಲ ಎಂದರೆ ಸರಿಯಲ್ಲ.  ಸದರಿ ನೋಟಿಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯು ಪ್ರತಿವಾದಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ಸ.ನಂ. 81/1ಅ ಯಾವತ್ತು ಅಳತೆ ಮಾಡಿಲ್ಲ ಹಾಗೂ ಪ್ರತಿವಾದಿಯು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಒತ್ತುವರಿ ಮಾಡದೆ ಇರುವ ಕಾರಣ ಒತ್ತುವರಿ ಕ್ಷೇತ್ರವನ್ನು ಬಿಟ್ಟುಕೊಡುತ್ತೇನೆ ಎಂದು ಪ್ರತಿವಾದಿಯು ಒಪ್ಪಿ ಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಜೊತೆ ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಸರ್ವೆ ಮಾಡುವ ಸಮಯದಲ್ಲಿ  ಪ್ರತಿವಾದಿಯು ಸ.ನಂ. 81/1ಬ ಜಮೀನಿನ ಮಾಲೀಕನಾಗಿರಲಿಲ್ಲ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ಪ್ರತಿವಾದಿ ಹಾಜರಿದ್ದ ಎಂದು ನುಡಿಯುತ್ತಾರೆ. ನಾನು ಅಸಲ ದಾವಾ ಸಂಖ್ಯೆ 1849/2012 ರಲ್ಲಿ ಮಾಡಿರುವ ಅಳತೆಯನ್ನು ದುರುಪಯೋಗಪಡಿಸಿಕೊಳ್ಳಲು ಈ ಖೊಟ್ಟಿ ದಾವೆಯನ್ನು  ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನ್ಯಾಯಾಲಯದ ಆದೇಶದ ಪ್ರಕಾರ ಭೂಮಾಪನ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಕೈನಕಾಶೆಯಲ್ಲಿ  ತೋರಿಸಿರುವ ಎ ಬಿ ಒಡ್ಡು ಸ.ನಂ. 81/2 ಹಾಗೂ 81/1ಬಿ ಇದಕ್ಕೆ ಮಾತ್ರ ಸಂಬಂಧಿಸಿದ್ದಾಗಿತ್ತು ಎಂದರೆ ಸರಿಯಲ್ಲ. ನನ್ನ ತಂದೆಯ ಮಾತು ಕೇಳಿಕೊಂಡು ಭೂಮಾಪಕರು ಮನಸೋ ಇಚ್ಚೆ ಸರ್ವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆಯರ ನಮಗೆ ಅನುಕೂಲವಾಗುವ ರೀತಿಯಲ್ಲಿ ಭೂಮಾಪನ ಮಾಡಿರುತ್ತಾನೆ ಎಂದರೆ

ಸರಿಯಲ್ಲ. ಪ್ರತಿವಾದಿಗೆ ವಾಟ್ನಿ ಆದ ಬಳಿಕ ಅವನ ಪಾಲಗಿ ಜಮೀನು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ತಂದೆಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.